## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್:123:ಪಿಹೆಚ್‌ಪಿ:78. ದಿನಾಂಕ: 2-6-1978.
2. ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ದಿನಾಂಕ: 24-7-2001ರ ಪತ್ರ ಸಂಖ್ಯೆ: ನಿಅಕಇ:ಅ.ಸ:ಯೋಜನೆ:2001-02.2532
3. ದಿನಾಂಕ: 6-8-2001ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಗಳು.

### ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಯೋಜನೆಯಲ್ಲಿ ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿವೇತನ ಯೋಜನೆಯ ಸರ್ಕಾರಿ ಆದೇಶದಂತೆ ನೀಡಲಾಗುತ್ತಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು ಇವರು, ಪ್ರಸ್ತುತ ಚಾಲ್ತಿಯಲ್ಲಿರುವ ಅಂಗವಿಕಲ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿವೇತನ ಯೋಜನೆಯ ಅನುಷ್ಠಾನದ ಕಾರ್ಯವಿಧಾನವು ವಿಳಂಬಕ್ಕೆ ಕಾರಣವಾಗಿರುವುದರಿಂದ, ಅದನ್ನು ಪರಿಷ್ಕರಿಸಲು, ಹಾಗೂ ಅಂಗವಿಕಲ ವಿದ್ಯಾರ್ಥಿ ವೇತನದ ದರವನ್ನು ಪರಿಷ್ಕರಿಸಲು ಪ್ರಸ್ತಾಪಿಸಿರುತ್ತಾರೆ.

ದಿನಾಂಕ: 6-8-2001 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ, ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಯೋಜನೆಯನ್ನು ಹಾಗೂ ಅಂಗವಿಕಲ ವಿದ್ಯಾರ್ಥಿವೇತನವನ್ನು ಪರಿಷ್ಕರಿಸಲು ಅನುಮೋದನೆ ನೀಡಿರುತ್ತದೆ.

ಆದ್ದರಿಂದ ಈ ಆದೇಶ

**ಸರ್ಕಾರಿ ಆದೇಶ ಸಂಖ್ಯೆ: ಮಮಅಇ-404 ಪಿಹೆಚ್‌ಪಿ 2001. ಬೆಂಗಳೂರು, ದಿನಾಂಕ: 4-9-2001**

ಅಂಗವಿಕಲರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಯೋಜನೆ ಅನುಷ್ಠಾನದ ವಿಧಾನದ ಬಗ್ಗೆ ಪ್ರಸ್ತುತ ಜಾರಿ ಇರುವ ಕಾರ್ಯವಿಧಾನವನ್ನು ಸ್ವಲ್ಪ ಮಾರ್ಪಡಿಸಿ, ಅಂಗವಿಕಲರಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡುವಾಗ, ಮೊದಲು ಶಾಲಾ ಮುಖ್ಯಸ್ಥರು, ಅರ್ಹ ಅಂಗವಿಕಲ ವಿದ್ಯಾರ್ಥಿಗಳ ಅರ್ಜಿಗಳನ್ನು ಸಂಗ್ರಹಿಸಿ, ಹಾಗೂ ದೃಢೀಕರಿಸಿ ಸಂಬಂಧಪಟ್ಟ ಜಿಲ್ಲೆಗಳ ಸಹಾಯಕ ನಿರ್ದೇಶಕರಿಗೆ ಕಳುಹಿಸಬೇಕು. ಸಂಬಂಧಪಟ್ಟ ಆಯಾಯ ಜಿಲ್ಲೆಗಳ ಸಹಾಯಕ ನಿರ್ದೇಶಕರು ಅರ್ಜಿಗಳನ್ನು ಪರಿಶೀಲಿಸಿ, ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ಹಾಗೂ ಖಜಾನೆಯಿಂದ ಹಣವನ್ನು ಸೆಳೆದು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆಯಲ್ಲಿಟ್ಟು ಸಂಬಂಧಪಟ್ಟ ಶಾಖಾ ಮುಖ್ಯಸ್ಥರಿಗೆ ಚೆಕ್ ನೀಡಲು ಹಾಗೂ ಅಂಗವಿಕಲರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ದರವನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಸರ್ಕಾರವು ಮಂಜೂರಾತಿ ನೀಡಿದೆ.

| ಕ್ರ. ಸಂ. | ಅಂಗವಿಕಲ ವಿದ್ಯಾರ್ಥಿ ಗಳಿಗೆ ಶಿಷ್ಯವೇತನ | ಮಾಹೆಯಾನ ಹಾಲಿ | ಮಾಹೆಯಾನ ಪರಿಷ್ಕೃತ ದರ | ವಿದ್ಯಾರ್ಥಿ ನಿಲಯ ಗಳಿಗೆ | ಅಂಧ ವಿದ್ಯಾರ್ಥಿ ಓದುಗರ ಭತ್ಯೆ | ದೈಹಿಕ ಅಂಗ ವಿಕಲರಿಗೆ ಸಂಚಾರಿ ಭತ್ಯೆ ಹಾಲಿ | ಪರಿಷ್ಕೃತ ಭತ್ಯೆ |
|---|---|---|---|---|---|---|---|
| | | ರೂ. | ರೂ. | ರೂ. | ರೂ. | | |
| 1. | 1 ರಿಂದ 5ನೇ ತರಗತಿ | 25 | 50 | - | 25 | 15 | 25 |
| 2. | 6 ರಿಂದ 8ನೇ ತರಗತಿ | 35 | 100 | - | 25 | 15 | 25 |
| 3. | 9, 10ನೇ ತರಗತಿಗಳು | 85 | 100 | 140 | 50 | 50 | 50 |
| 4. | ಪಿ.ಯು.ಸಿ. | 85 | 150 | | | | |
| 5. | ಬಿ.ಎ., ಬಿ.ಎಸ್ಸಿ, ಬಿ.ಕಾಂ. ಇತರೆ ಪದವಿ ಹಾಗೂ ಟಿಸಿಹೆಚ್/ತತ್ಸಮಾನ | 125 | 200 | 180 | 75 | 50 | 50 |
| 6. | ಬಿ.ಇ., ಬಿ.ಟೆಕ್, ಎಂ.ಬಿ.ಬಿ.ಎಸ್. ಎಲ್.ಎಲ್.ಬಿ./ಡಿಪ್ಲೊಮೋ ಇನ್ ಪ್ರಾಫೆಷನ್ ಮತ್ತು ಇಂಜಿನಿಯರಿಂಗ್ ಇನ್ ಪ್ಲ್ಯಾಂಟ್ ಟ್ರೈನಿಂಗ್ | 170 | 250 | 240 | 100 | 50 | 50 |
| 7. | ಎಂ.ಎ./ಎಂ.ಎಸ್ಸಿ/ಎಂ.ಕಾಂ. ಎಲ.ಎಲ್.ಎಂ. ಹಾಗೂ ತತ್ಸಮಾನ | 170 | 300 | 240 | 100 | | |

ಇದಕ್ಕೆ ತಗಲುವ ವೆಚ್ಚವನ್ನು 2235-02-101-0-05 (ಯೋಜನೇತರ) ಅಡಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ: 6-8-2001 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ತೀರ್ಮಾನದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಹುಲಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಗೆ,

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ನಿರ್ದೇಶಕರು ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು
3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
4. ಎಲ್ಲಾ ಜಿಲ್ಲೆಯ ಸಹಾಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಖೆ, ಬೆಂಗಳೂರು
5. ಆಂತರಿಕ ಆರ್ಥಿಕ ಸಲಹೆಗಾರರು, ಮಮಅ, ಇಲಾಖೆ, ಬೆಂಗಳೂರು
6. ಅಪರ ಮತ್ತು ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು ಅದರ ಉಪ ಕಾರ್ಯದರ್ಶಿಗಳಿಗೆ.